ಹಾಕಿರತಕ್ಕಂತಹ ಜನರಲ್ಲಿ ಬಸರಿಯಾದಂತಹ ಹೆಂಗಸುಗಳಿದ್ದಾರೆ, ಒಂದು ತಿಂಗಳೂ ಸಹ ಆಗಿಲ್ಲ ಇನ್ನೂ ಹೆರಿಗೆ ಆಗಿ. ಮಕ್ಕಳನ್ನು ಮನೆಯಿಂದ ಹೊರಗೆ ಹಾಕಿದ್ದಾರೆ. ಸಾಮಾನುಗಳನ್ನು ಮನೆಯಿಂದ ಹೊರಗಡೆ ಬಿಸಾಕಿದ್ದಾರೆ, ರೇಡಿಯೋ, ಟಿ.ವಿ.ಗಳನ್ನು ಎಲ್ಲವನ್ನೂ ಹೊರಗಡೆ ಬಿಸಾಕಿದ್ದಾರೆ. ಅಲ್ಲಿ ಏನೇನು ಆಗಬೇಕು ಆ ರೀತಿಯಲ್ಲಿ ಮಾಡಿ ನರಕಯಾತನೆಯನ್ನು ಮಾಡಿದ್ದಾರೆ. ಕೋರ್ಟ್‌ನವರು ಕೊಟ್ಟಿರತಕ್ಕಂತಹ ಆರ್ಡರ್ ಏನು? ಪೋಲೀಸ್‌ನವರು ಯಾವ ರೀತಿಯಲ್ಲಿ ಎಕ್ಸಿಕ್ಯೂಟ್ ಮಾಡುತ್ತಿದ್ದಾರೆ? ಅದಕೋಸ್ಕರವಾಗಿ ನಾನು ತಮ್ಮಲ್ಲಿ ಅರಿಕೆಯನ್ನು ಮಾಡಿಕೊಳ್ಳುವುದೇನೆಂದರೆ ನನ್ನ ರಾಜಕೀಯ ಇತಿಹಾಸದಲ್ಲಿ ಇಂತಹ ದೌರ್ಜನ್ಯವನ್ನು ಇದುವರೆಗೆ ನೋಡಿರಲಿಲ್ಲ. ಸತ್ಯ ಹೇಳುತ್ತಿದ್ದೇನೆ. ಇಂತಹ ದೌರ್ಜನ್ಯವು ಯಾವತ್ತೂ ಸಹ ನಡೆದಿಲ್ಲ. ಆ ಮನೆಯಲ್ಲಿ ರತಕ್ಕಂತಹ ಅಮಾಯಕರನ್ನು ಕೋರ್ಟ್‌ಗೆ ಪಾರ್ಟಿಮಾಡಲಿಲ್ಲ. They are not even Respondents. ಇದು ಈ ರೀತಿಯಾದಂತಹ ಪರಿಸ್ಥಿತಿಯು ಇರುವಾಗ, ಅನ್ಯಾಯವಾಗಿ ನೋಟೀಸ್ ಇಲ್ಲದೇ ಆದರಲ್ಲಿಯೂ ಗಂಡಸರುಗಳು ಮನೆಯಲ್ಲಿ ಇಲ್ಲದಿದ್ದಾಗ, ಹೆಂಗಸರು ಮಾತ್ರ ಮನೆಯಲ್ಲಿದ್ದಾಗ ಬುಲ್ಡೋಜರ್‌ನ್ನು ತೆಗೆದುಕೊಂಡು ಹೋಗಿ ಮನೆಗಳನ್ನು ಹೊಡೆದು ಹಾಕಿ ಅವರ ಮನೆಯಲ್ಲಿದ್ದ ಸಾಮಾನುಗಳನ್ನು, ತರಕಾರಿಗಳನ್ನು, ಆಹಾರ ಧಾನ್ಯಗಳನ್ನು ಮನೆಯಿಂದ ಹೊರಗಡೆ ಬಿಸಾಕಿದ್ದಾರೆ. ಅವರ ಆಕ್ರಂದವನ್ನು ಕೇಳುವುದಕ್ಕೆ ಆಗುವುದಿಲ್ಲ. ಅದಕೋಸ್ಕರವಾಗಿ ನಾನು ತಮ್ಮಲ್ಲಿ ಅರಿಕೆಯನ್ನು ಮಾಡಿಕೊಳ್ಳುವುದೇನೆಂದರೆ, ಪೋಲೀಸರ ದೌರ್ಜನ್ಯಕ್ಕೆ ಇದು ನಮ್ಮ ರಾಜ್ಯಕ್ಕೆ ಮೊದಲನೇಯ ಉದಾಹರಣೆಯಾಗಿದೆ. ಆದುದರಿಂದ ಸಂಬಂಧಪಟ್ಟಂಥವರನ್ನು ಕೂಡಲೇ ಅಮಾನತ್ತು ಮಾಡಬೇಕು ಮತ್ತು ಸಿ.ಓ.ಡಿ. ಎನ್‌ಕ್ವೈರಿಯನ್ನು ಮಾಡಬೇಕು. ತಪ್ಪಿದ್ದರೆ ಟ್ರಕ್‌ಗಳನ್ನು ತೆಗೆದುಕೊಂಡು ನೂರಾರು ಜನರುಗಳನ್ನು ಕರೆದುಕೊಂಡು ಬಂದು, ಬುಲ್ಡೋಜರ್‌ಗಳನ್ನು ತೆಗೆದುಕೊಂಡು ಬಂದು ನಾಗರೀಕರ ಮನೆಗಳನ್ನು ಒಡೆದು ಹಾಕಿದವರಿಗೆ.....

MR. SPEAKER :- Let us her from the Govt. you have placed your demand.

SRI R. ROSHAN BAIG :- I have taken note of the views expressed by the Hon'ble Member. I will have the matter examined and I will make a detailed statement,

ಅಧ್ಯಕ್ಷರು :- ಈಗ ನೀರಾವರಿಯ ಸಚಿವರು ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿದಕ್ಕೆ ಉತ್ತರವನ್ನು ಕೊಡುತ್ತೀರೋ?

(ಖೂ) ಕಬಿನಿ ಎರಡನೇ ಹಂತ ವರುಣಾ ತಾರಕಾ ಮುಂತಾದ ನೀರಾವರಿ ಕಾಮಗಾರಿಗಳ ಪ್ರಗತಿ.

+ **ಶ್ರೀ ಕೆ. ಎನ್. ನಾಗೇಗೌಡ :-** ಮಾನ್ಯ ಅಧ್ಯಕ್ಷರೆ, ಅವರು ನಾಲ್ಕು ವಿಚಾರಗಳನ್ನು ಕೇಳಿದ್ದಾರೆ. ಅದರಲ್ಲಿ ಕಬಿನಿ ಎರಡನೇ ಹಂತದ ಡೀಟೈಲ್ಡ್ ಇನ್‌ವೆಸ್ಟಿಗೇಷನ್ ಇವತ್ತು ಪ್ರಗತಿಯಲ್ಲಿದೆ. ವರುಣಕ್ಕೆ ಈಗಾಗಲೇ ಉಪಮುಖ್ಯ ಮಂತ್ರಿಗಳು ಹೇಳಿದ ಹಾಗೆ ಅವರ ಎಕ್ಸ್‌ಪೆಂಡಿಚರ್ 168 ಕೋಟಿ ರೂಪಾಯಿ ಇದೆ, ಇಲ್ಲಿಯವರೆಗೆ 69 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. 1996-97 ಕ್ಕೆ 32 ಕೋಟಿ ರೂಪಾಯಿ ಹಣ ಇಡಲಾಗಿದೆ. ವರುಣ ನಾಲೆ ಬಗ್ಗೆ ನಾವು ಯಾವ ರೀತಿಯ

ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಆದರಂತೆ ಎಲ್ಲಾ ಪೂರ್ಣವಾಗುತ್ತದೆ, ತೊಂದರೆ ಏನೂ ಇಲ್ಲ. ಇನ್ನೂ ತಾರಕಾ ಬಗ್ಗೆ ಕೇಳಿದ್ದಾರೆ. ತಾರಕಾಕ್ಕೆ 1996-97 ರಲ್ಲಿ ಒಂದು ಕೋಟಿ ಹಣ ಇಟ್ಟಿದ್ದೇವೆ. ಇನ್ನೂ ಹೆಚ್ಚು ಹಣ ಒದಗಿಸಬೇಕೆಂಬುದು ನಮ್ಮ ಉದ್ದೇಶ ಇದೆ. ಹಣ ಒದಗಿಸಿ ಆದನ್ನು ಪೂರ್ಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸುವರ್ಣಮತಿಗೆ 1.68 ಕೋಟಿ ರೂಪಾಯಿ ಹಣ ಬೇಕಾಗಿದೆ. ಆದನ್ನು ಈ ವರ್ಷ ಮತ್ತು ಬರುವ ವರ್ಷ, ಎರಡು ವರ್ಷಗಳಲ್ಲಿ ಹಣ ಒದಗಿಸಿ ಪೂರ್ಣ ಮಾಡುತ್ತೇವೆ. ಪಿರಿಯಾಪಟ್ಟಣದ ಎಲ್ಲಾ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ; ಹಣ ಬಿಡುಗಡೆ ಮಾಡಿದ್ದೇವೆ. ವರ್ಕ್ ಫಾಸ್ಟ್ ಪ್ರೋಗ್ರೆಸ್‌ನಲ್ಲಿದೆ.

(ಎ) ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯದ ನಿರ್ದೇಶಕರಿಗೆ ಅಧಿಕಾರ ನೀಡದೇ ಇರುವ ಬಗ್ಗೆ.

+ **ಚಂದ್ರಕಾಂತ್ ಜಿ. ಬೆಲ್ಲದ್ :-** ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವಂತೆ, ಈ ಸದನದಲ್ಲಿರುವಂತೆ ಎಲ್ಲಾ ಸದಸ್ಯರಿಗೆ ಗೊತ್ತಿರುವಂತೆ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ, ಹುಬ್ಬಳ್ಳಿ ಏನಿದೆ ಇದು ಉತ್ತರ ಕರ್ನಾಟಕದ ಒಂದು ಹೆಮ್ಮೆಯ ವೈದ್ಯಕೀಯ ಮಹಾವಿದ್ಯಾಲಯ. ಈ ವಿದ್ಯಾಲಯ ಬಹಳ ಅಧೋಗತಿಗೆ ಹೋಗಿತ್ತು ಎಂಬ ವಿಷಯ ಬಹುಶಃ ಉತ್ತರ ಕರ್ನಾಟಕದ ಎಲ್ಲರಿಗೆ ಗೊತ್ತಿದೆ. ಈ ವಿದ್ಯಾಲಯದ ದುಸ್ಥಿತಿಯನ್ನು ಕಂಡು ಸರ್ಕಾರ ಆದನ್ನು ಸ್ವಾಯತ್ತ ಸಂಸ್ಥೆ ಎಂದು ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಎಂದು ಮಾಡಿದ್ದಕ್ಕೆ ನಾವು ತುಂಬ ಕೃತಜ್ಞರಾಗಿದ್ದೇವೆ. ಆದರೆ ಅಲ್ಲಿ ಒಬ್ಬ ಡಾ: ನಾಗಲೋತಿಮಠ್ ಎಂದು ಏಷ್ಯಾದಲ್ಲೇ ಉತ್ತಮವಾದ ಹೆಸರು ಪಡೆದಂಥ ಡಾಕ್ಟರು ಹಿಂದೆ ಕೆಎಲ್‌ಇ ಸಂಸ್ಥೆಯ ಜಿಎನ್‌ಎಂಸಿ ಮೆಡಿಕಲ್ ಕಾಲೇಜಿಗೆ ಹೆಸರು ತಂದಂಥ ವೈದ್ಯರು, ಬಿಜಾಪುರದ ಬಿಎಲ್‌ಡಿ. ಸಂಸ್ಥೆಯ ವೈದ್ಯಕೀಯ ಮಹಾ ವಿದ್ಯಾಲಯಕ್ಕೆ ಹೋಗಿ ಸೇವೆ ಮಾಡಿದಂಥ ವ್ಯಕ್ತಿ. ಮೈಸೂರಿನ ಸುತ್ತೂರು ಮಠದ ವೈದ್ಯಕೀಯ ವಿದ್ಯಾಲಯದಲ್ಲಿದ್ದವರನ್ನು ತೆಗೆದುಕೊಂಡು ಬಂದರು ಬಹಳ ಸಂತೋಷ. ಅಂಥ ಒಬ್ಬ ಸೇವೆ ಮಾಡಬೇಕೆಂಬ ಡೆಡಿಡಿಕೇಟೆಡ್ ವೈದ್ಯರಿಗೆ ಡೈರೆಕ್ಟರ್ ಎಂಬ ಪದವಿ ಕೊಟ್ಟು ಅಲ್ಲ ಕೂರಿಸಿದ್ದಾರೆ. ಆದರೆ ಇದುವರೆಗೆ ಅಧಿಕಾರ ಕೊಟ್ಟಿಲ್ಲ. ಇವತ್ತು ಅಲ್ಲಿ ಇರಲಿಕ್ಕೆ ಬೇಜಾರಾಗಿ ಅಲ್ಲಿಂದ ಬಿಟ್ಟು ಹೋಗಬೇಕೆಂಬ ಸ್ಥಿತಿಗೆ ಅವರನ್ನು ತಂದಿದ್ದಾರೆ. ಇಂಥ ಒಬ್ಬ ಡೆಡಿಕೇಟೆಡ್ ಡಾ: ನಾಗಲೋತಿಮಠ್ ಎಂಬುವವರು ಏಷ್ಯಾದಲ್ಲೇ ಪೆಥಾಲಜಿಯಲ್ಲಿ ಹೆಸರುವಾಸಿಯಾದ ಡಾಕ್ಟರಿಗೆ ಇದುವರೆಗೆ ಆರ್ಡರ್ ಕಳುಹಿಸಿಲ್ಲ. ದಯವಿಟ್ಟು ಇದರ ಬಗ್ಗೆ ವೈದ್ಯಕೀಯ ಮಹಾ ವಿದ್ಯಾಲಯದ ಸಚಿವರಿದ್ದಾರೆ, ಅವರು ಉತ್ತರ ಕೊಡಬೇಕು. ಈಗಾಗಲೇ ಬಹಳ ದಿನಗಳಿಂದ ನಾವು ಕಾಯುತ್ತಿದ್ದೇವೆ.

ಡಾ: ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) :- ಅವರು ಹೇಳಿದ ಹಾಗೆ ಬಳ್ಳಾರಿ ಮತ್ತು ಹುಬ್ಬಳ್ಳಿಯ ಎರಡು ಮೆಡಿಕಲ್ ಕಾಲೇಜ್‌ಗಳು ಏನಿವೆ ಅವು ಆಟಾನಮಸ್ ಎಂದು ಹಿಂದೆ ತೀರ್ಮಾನವಾಗಿದೆ. ಆದರೆ ಅವರು ಹೇಳಿದಂಥ ಡಾ: ನಾಗಲೋತಿಮಠ್ ಎಂಬುವವರನ್ನು ನಾವು ಅಲ್ಲಿ ಡೈರೆಕ್ಟರ್ ಆಗಿ ಹುಬ್ಬಳ್ಳಿಗೆ ಅಪಾಯಿಂಟ್ ಮಾಡಿದ್ದೇವೆ. ಆದರೆ ನಾವು ಹುಬ್ಬಳ್ಳಿ ಮತ್ತು ಬಳ್ಳಾರಿ ಎರಡನ್ನೂ